# ಎರಿ ಪ್ರ್ಯೂಪ ಆಹಾರಪರೀಕ್ಷೆ

**ಕಚೇರಿ ಕಾರ್ಯ ನಿಮಿತ್ತ ಅಸ್ಸಾಂಗೆ ಹೋದ ಸಸ್ಯಾಹಾರಿ ಅಧಿಕಾರಿಯೊಬ್ಬರಿಗೆ ಎಲ್ಲೆಡೆ ಎದುರಾದುದು ಎರಿ ಪ್ರ್ಯೂಪ ಖಾದ್ಯಗಳು. ನಸುನಗೆಯನ್ನು ಮೂಡಿಸುವಂತಿರುವ ಈ ಬರಹ, ಮಾಂಸಾಹಾರ ಪ್ರಧಾನ ಸ್ಥಳಗಳಲ್ಲಿ ಸಸ್ಯಾಹಾರಿಗಳ ಪಡಿಪಾಟಲುಗಳನ್ನು ರಸವತ್ತಾಗಿ ಹಿಡಿದಿಟ್ಟಿದೆ.**

**■ ಮುಕುಂದ್ ಕಿರಸೂರ್**

ಕೆಲವು ವರ್ಷಗಳ ಹಿಂದೆ ಕೇಂದ್ರ ಸರ್ಕಾರದ ಉನ್ನತ ದರ್ಜೆಯ ಅಧಿಕಾರಿಯೊಬ್ಬರೊಡನೆ ಅಸ್ಸಾಂ ಹಾಗೂ ಇನ್ನಿತರ ಈಶಾನ್ಯ ರಾಜ್ಯಗಳ ರೇಷ್ಮೆ ಅಭಿವೃದ್ಧಿ ಕುರಿತಾದ ಅಧ್ಯಯನವೊಂದಕ್ಕಾಗಿ ಗೌಹಾತಿಗೆ ಹೋಗಿದ್ದೆ. ದಟ್ಟ ಮಂಜಿನಿಂದಾಗಿ ಬೆಳಿಗ್ಗೆ ಆರು ಗಂಟೆಗೆ ಹೊರಡಬೇಕಾದ ವಿಮಾನ ಬೆಂಗಳೂರು ಬಿಡುವಾಗಲೇ ಒಂಬತ್ತು ಗಂಟೆ! ಹೊಟ್ಟೆಯಲ್ಲಿ ಇಲಿಗಳ ಓಡಾಟ. ಫ್ಲೈಟ್‌ನಲ್ಲಿ ಕೊಟ್ಟ ತಿಂಡಿ ಸ್ವಲ್ಪವೂ ರುಚಿಸಲಿಲ್ಲ. ಬೆಳಗ್ಗೆ 11.30ಕ್ಕೆ ಕೊಲಕತ್ತ ತಲುಪಿ ಕನೆಕ್ಟಿಂಗ್ ಫ್ಲೈಟ್ ಹಿಡಿಯಲು ಹೋದರೆ ಉಕ್ಕಿನ ಹಕ್ಕಿ ಆಗಲೇ ಹಾರಿಹೋಗಿತ್ತು.

ಅಂತೂ ಇಂತೂ ಇನ್ನೊಂದು ವಿಮಾನದಲ್ಲಿ ಗೌಹಾತಿ ತಲುಪಿದ್ದಾಯಿತು. ಬ್ರಹ್ಮಪುತ್ರ ನದಿಯ ದಡಲ್ಲಿರುವ ಸ್ಟಾರ್ ಹೋಟೆಲ್ ಒಂದರಲ್ಲಿ ನಮಗೆ ಅಂದು ರಾಜಾತಿಥ್ಯ! ಅಸ್ಸಾಂನ ಅಧಿಕಾರಿಗಳ ದಂಡೇ ಅಲ್ಲಿತ್ತು. ಶುದ್ಧ ಶಾಖಾಹಾರಿಯಾದ ನಾನು ಅಂತಹ ಸ್ಟಾರ್ ಹೋಟೆಲ್‌ಗಳಲ್ಲಿ ಭಕ್ಷ್ಯಗಳ ಹೆಸರಿರುವ ಪುಟ್ಟ ಪುಟ್ಟ ಬೋರ್ಡ್‌ಗಳನ್ನು ಓದಿ, ಊಟ ಬಡಿಸುವವರ ಹತ್ತಿರವೂ ಆ ಖಾದ್ಯ ಸಸ್ಯಾಹಾರ ಎಂದು ಮನವರಿಕೆ ಮಾಡಿಕೊಂಡೇ ಬಡಿಸಿಕೊಳ್ಳುತ್ತಿದ್ದೆ.

ಅನೇಕ ವರ್ಷಗಳಿಂದ ನನಗದು ಅಭ್ಯಾಸವೇ ಆಗಿಹೋಗಿದೆ, ಇಂದಿಗೂ. ಅದಕ್ಕೊಂದು ಕಾರಣವೂ ಉಂಟು. ನಾನು ಕೇಂದ್ರ ಕೆಲಸದ ಸಲುವಾಗಿ ದಿಲ್ಲಿಯಲ್ಲಿ ಕೊಂಚ ದಿನ ಇದ್ದಾಗ ಸಹೋದ್ಯೋಗಿಗಳೊಡನೆ ಅಲ್ಲಿರುವ ಒಂದು ಹೋಟೆಲ್‌ಗೆ ರಾತ್ರಿ ಊಟಕ್ಕೆ ಹೋಗಿದ್ದೆ. ಅವರೆಲ್ಲ ಚಿಕನ್ ಬಿರಿಯಾನಿ ತಿನ್ನುವಾಗ ಶಾಖಾಹಾರಿಗಳಾದ ನಾನು ಹಾಗೂ ನನ್ನ ಸ್ನೇಹಿತ ರಾಮಪ್ಪ ಸುಮ್ಮನೆ ಕುಳಿತಿರುವುದನ್ನು ನೋಡಿ ನಮ್ಮ ಸ್ನೇಹಿತ ಚಂದ್ರು 'ವೆಜ್ ಬಿರಿಯಾನಿ ತಿನ್ನಿ' ಅಂತ ಆರ್ಡರ್ ಮಾಡಿದರು. ನನಗೆ ಕೊಂಚವೂ ಮನಸ್ಸಿಲ್ಲ. ರಾಮಪ್ಪ ಆಕರ್ಷಕವಾಗಿ ಕಂಡ ಬಿರಿಯಾನಿಯನ್ನು ಸಂತೋಷದಿಂದಲೇ ತಿನ್ನಲು ಪ್ರಾರಂಭಿಸಿದ. ನಾಲ್ಕೈದು ತುತ್ತು ತಿಂದ ನಂತರ ಬಾಯಿಗೆ ಏನೋ ಬಂತು. ಮೆತ್ತಮೆತ್ತಗಿದ್ದ ಅದನ್ನು ಪರೀಕ್ಷಿಸಿ ಚಂದ್ರೂಗೆ ತೋರಿಸಿದ. ಗಂಭೀರ ಸ್ವಭಾವದ ಚಂದ್ರು ಏಕೋ ಸೊಟ್ಟ ಮುಖ ಮಾಡಿದ. ಪ್ಲೇಟನ್ನು ಇನ್ನೂ ಮುಟ್ಟಿರದ ನಾನು ವೇಟರನ್ನು ಕರೆದು 'ಏನಿದು?' ಅಂತ ಗದರಿ ಕೇಳಿದೆ. ಹೆದರಿದ ವೇಟರ್, 'ವೆಜ್ ಬಿರಿಯಾನಿ ಖಾಲಿಯಾಗಿತ್ತು. ಚಿಕನ್ ಬಿರಿಯಾನಿಯಲ್ಲಿರುವ ತುಂಡುಗಳನ್ನು ಆರಿಸಿ ತೆಗೆದು ಅದನ್ನೇ ವೆಜ್ ಬಿರಿಯಾನಿ ಎಂದು ಕೊಟ್ಟೆ. ಅಲ್ಲಲ್ಲಿ ಒಂದೊಂದು ತುಂಡು ಉಳಿದುಕೊಂಡಿದೆ. ಕ್ಷಮಿಸಿ ಸರ್' ಅಂದ. ಪೆಚ್ಚು ಮುಖ ಮಾಡಿದ್ದ ರಾಮಪ್ಪ ಅಂದು ದಿನವಿಡೀ ವಾಂತಿ ಮಾಡುತ್ತಲೇ ಇದ್ದ. ಆಶ್ಚರ್ಯವೆಂದರೆ ಶುದ್ಧ ಶಾಖಾಹಾರಿಯಾಗಿದ್ದ ರಾಮಪ್ಪ ಇಂದು ಹೆಚ್ಚು ಕಡಿಮೆ ಶುದ್ಧ ಮಾಂಸಾಹಾರಿಯೇ ಆಗಿದ್ದಾನೆ! ಅಂದಿನ ಘಟನೆ ನಡೆದಾಗಿನಿಂದ ಊಟದ ಬಗೆಗಿನ ನನ್ನ ಜಾಗರೂಕತೆ ಮತ್ತಷ್ಟು ಹೆಚ್ಚಾಗಿದೆ.

ಅಲ್ಲಿ ಸಾಲುಸಾಲಾಗಿ ಶಿಸ್ತಿನಿಂದಿಟ್ಟ ವಿವಿಧ ಭಕ್ಷ್ಯಗಳನ್ನು ನನ್ನ ತಟ್ಟೆಗೆ ಹಾಕಿಸಿಕೊಳ್ಳುತ್ತಲೇ ಬಂದೆ. ಕೊನೆಯಲ್ಲಿ ಒಂದು ವಿಶೇಷ ಭಕ್ಷ್ಯ! ಜನರು ಗುಂಪು ಗುಂಪಾಗಿ ಇರುವೆಗಳಂತೆ ಅದರ ಸುತ್ತ ನಿಂತು ಬಡಿಸಿಕೊಳ್ಳುತ್ತಿದ್ದರು. ಅದರ ಕೆಳಗಿರುವ ಬೋರ್ಡ್ ನೋಡಿದೆ. 'ಎರಿ ಫ್ರೈ' ಎಂದಿತ್ತು! ಬೆಂಡಿಫ್ರೈ, ದಾಲ್‌ಫ್ರೈ, ಆಲೂಫ್ರೈ, ಪನೀರ್‌ಫ್ರೈ, ಇತ್ಯಾದಿಗಳನ್ನು ದಂಡಿಯಾಗಿ ತಿಂದು ಗೊತ್ತಿದ್ದ ನನಗೆ 'ಎರಿ ಫ್ರೈ' ಎಂದರೇನು ಅಂತ ತಕ್ಷಣ ಅರ್ಥವಾಗಲಿಲ್ಲ. ನೋಡಲೇನೋ ಗೋಡಂಬಿ ಫ್ರೈ ತರಹ ಆಕರ್ಷಕವಾಗಿಯೇ ಇತ್ತು!

ನನ್ನ ಜೊತೆ ಇದ್ದ ಅನೇಕ ಸ್ಥಳೀಯರು

